(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನದ ಕಲಾಪವು 6.00 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಹತ್ತು ನಿಮಿಷದ ನಂತರ ಸೇರಲು ನಿಶ್ಚಯಿಸಿತು)

(ಸದನದ ಕಲಾಪವು ಪುನಃ ರಾತ್ರಿ 8.10 ಗಂಟೆಗೆ ಪ್ರಾರಂಭವಾದಾಗ ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಎನ್.ವೈ. ಗೋಪಾಲಕೃಷ್ಣ ಅಧಕ್ಷರ ಪೀಠದಲ್ಲಿ ಉಪಸ್ಥಿತರಾದರು)

(ಮಾನ್ಯ ವಿರೋಧ ಪಕ್ಷದ ನಾಯಕರು ಹಾಗು ಸದಸ್ಯರು ಧರಣಿಯಲ್ಲಿ ಭಾಗವಹಿಸಿದ್ದರು)

ಉಪಾಧ್ಯಕ್ಷರು:– ದಯಮಾಡಿ ತಾವೆಲ್ಲಾ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕಾಗಿ ವಿನಂತಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ನಾನು ನಂಜುಂಡಪ್ಪ ವರದಿಗೆ ಬೆಂಬಲವನ್ನು ಸೂಚಿಸಿ ಧರಣಿಯಲ್ಲಿ ಪಾಲ್ಗೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಹ ಧರಣಿಯಲ್ಲಿ ಪಾಲ್ಗೊಂಡಿದ್ದರು)

17. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>

ವಿಷಯ: ಚಿಕ್ಕನಾಯಕನ ಹಳ್ಳಿಯಲ್ಲಿ ಶಾಲಾಕಟ್ಟಡ ಬಿದ್ದು ಮಕ್ಕಳು ಮೃತಪಟ್ಟಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸನ್ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು statement ಮಾಡಲಿಕ್ಕೆ ಅವಕಾಶ ಕೊಡಿ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಶಾಲಾ ಕಟ್ಟಡ ಕುಸಿದು ಬಿದ್ದಿರುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದರೆಂದು ಮಾನ್ಯ ಗೃಹ ಸಚಿವರಲ್ಲಿ ಕೇಳ ಬಯಸುತ್ತೇನೆ.

ಉಪಾಧ್ಯಕ್ಷರು:– ಮಾಧುಸ್ವಾಮಿಯವರೇ, ಮೊದಲು ಇವರ ಸಮಸ್ಯೆ ಬಗೆಹರಿಯಲಿ. ಆಮೇಲೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಉಪಾಧ್ಯಕ್ಷರೆ, ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಶಾಲಾ ಕಟ್ಟಡ ಬಿದ್ದು ಮಕ್ಕಳು ಮೃತಪಟ್ಟಿದ್ದಾರೆಂದು ದೂರವಾಣಿ ಕರೆ ಬಂದಿದೆ, ದಯಮಾಡಿ ಅವರಿಗೆ ಏನು ರಕ್ಷಣೆ ಕೊಟ್ಟಿದ್ದೀರಿ? ಅಲ್ಲಿ ತುಂಬಾ tension ಇದೆ, ಹಾಗಾಗಿ ಸನ್ಮಾನ್ಯ ಗೃಹ ಸಚಿವರು ಇದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿ ದ್ದಾರೆಂದು ಈಗಲೇ ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯಾಹ್ನ ಶಾಲಾ ಕಟ್ಟಡ ಕುಸಿದು ನಡೆದಿರುವ ದುರ್ಘಟನೆ ಬಗ್ಗೆ ಮಾನ್ಯ ಶಾಸಕರಾದ ಮಾಧುಸ್ವಾಮಿಯವರು ಪ್ರಸ್ತಾಪಿಸಿದ್ದಾರೆ.

ಉಪಾಧ್ಯಕ್ಷರು:– ಒಂದು ನಿಮಿಷ ಸಚಿವರು, ಈಗ House is not in order. I am requesting all the Members to go to their seats.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, House is in order ಇಂಥ ಪರಿಸ್ಥಿತಿಯಲ್ಲಿ ತಾವೇ ಅನೇಕ ಬಾರಿ ರೂಲಿಂಗ್ ಕೊಟ್ಟಿದ್ದೀರಿ. House is in order ಹಾಗಾಗಿ ಮಾನ್ಯ ಶಾಸಕರಾದ ಮಾಧುಸ್ವಾಮಿಯವರು ಕೇಳಿದಂತೆ ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯಾಹ್ನ ಶಾಲಾ ಕಟ್ಟಡ ಕುಸಿದು ಮಕ್ಕಳು ಮೃತಪಟ್ಟಿದ್ದಾರೆಂದು ಈಗ ಒಂದು ಗಂಟೆ ಹಿಂದೆ ನಮ್ಮ ಗಮನಕ್ಕೆ ತಂದರು. ನಾನು ಈಗಾಗಲೇ ನಮ್ಮ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆಯನ್ನು ನೀಡಿದ್ದೇನೆ, ಆ ದುರ್ಘಟನೆಯ ಬಗ್ಗೆ ಈ ಕೂಡಲೇ ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡು ನನಗೆ ತಕ್ಷಣವೇ ತಿಳಿಸಬೇಕೆಂದು ಹೇಳಿದ್ದೇನೆ. ಅಲ್ಲಿ ಏನಾದರೂ ಅವಘಡ ಗಳಾಗಿರುವ ಸಂದರ್ಭದಲ್ಲಿ ಅವರಿಗೆ ಏನು ಪರಿಹಾರ ಕೊಡಬೇಕೋ ಅದರ ಬಗ್ಗೆ ಮತ್ತು ತಪ್ಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ವರದಿ ತರಿಸಿ ಮಾನ್ಯ ಶಾಸಕರಿಗೆ ತಿಳಿಸುತ್ತೇನೆ.